**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೇಳನೆಯ ಅಧಿವೇಶನ**

# ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–69)**
**(ಕರ್ನಾಟಕ ವಿಧಾನಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕಾರವಾದ ರೂಪದಲ್ಲಿ)**

ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013 (2013ರ ಕರ್ನಾಟಕ ಅಧಿನಿಯಮ ಸಂಖ್ಯೆ 37)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013 (2013ರ ಕರ್ನಾಟಕ ಅಧಿನಿಯಮ ಸಂಖ್ಯೆ 37)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 2ನೇ ಪ್ರಕರಣದಲ್ಲಿ,-

(i) (ಸಿ) ಖಂಡದ ತರುವಾಯ, ಈ ಮುಂದಿನ ಹೊಸ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಸಿ-1) "ಸಮಿತಿ" ಎಂದರೆ, 17ಎ ಪ್ರಕರಣದಡಿ ರಚಿಸಲಾದ ಜಿಲ್ಲಾ ಮಟ್ಟದ ಸಮಿತಿ ಮತ್ತು ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿ".

(ii) (ಎಚ್) ಖಂಡದ ತರುವಾಯ, ಈ ಮುಂದಿನ ಹೊಸ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(i) "ನಿಯಮಗಳು" ಎಂದರೆ ಈ ಅಧಿನಿಯಮದಡಿ ರಚಿಸಿದ ನಿಯಮಗಳು".

**3. ಪ್ರಕರಣ 3ರ ತಿದ್ದುಪಡಿ.-** ಮೂಲ ಅಧಿನಿಯಮದ, 3ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ,-

(i) (ಜಿ) ಖಂಡದಲ್ಲಿ, "ಲೋಕೋಪಯೋಗಿ ಇಲಾಖೆ", ಎಂಬ ಪದಗಳ ತರುವಾಯ "ಅಥವಾ ಕಾರ್ಯಪಾಲಕ ಅಭಿಯಂತರರ ದರ್ಜೆಗೆ ಕಡಿಮೆಯಲ್ಲದ ಆತನ ಪ್ರತಿನಿಧಿ", ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) (ಎಚ್) ಖಂಡದಲ್ಲಿ, "ಅಥವಾ ಅವರ ನಾಮನಿರ್ದೇಶಿತರು" ಎಂಬ ಪದಗಳ ಬದಲಾಗಿ "ಅಥವಾ ಸರ್ಕಾರದ ಉಪಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ಆತನ ಪ್ರತಿನಿಧಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) (ಜೆ-2) ಖಂಡದ ತರುವಾಯ, ಈ ಮುಂದಿನ ಹೊಸ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಜೆ-3) ಸರ್ಕಾರವು ನಾಮನಿರ್ದೇಶಿಸಿದ ವಿಗ್ರಹ ಶಾಸ್ತ್ರಗಳು ಮತ್ತು ದೇವಾಲಯದ ಮೂಲ ಸ್ವರೂಪದ ಹಲವು ವಿಧಗಳ ಶೈಲಿ, ಪ್ರಮುಖ ರೂಪವಾಗಿ ವಿಶ್ವಕರ್ಮ ವಾಸ್ತುಶಿಲ್ಪದ ವಿನ್ಯಾಸಗಳುಳ್ಳ ಹಿಂದೂ ದೇವಾಲಯ ವಾಸ್ತುಶಿಲ್ಪದ ಗುರುತರ ಜ್ಞಾನವನ್ನು ಹೊಂದಿರುವ ಒಬ್ಬ ವ್ಯಕ್ತಿ".

**4. ಪ್ರಕರಣ 8ರ ತಿದ್ದುಪಡಿ.-** ಮೂಲ ಅಧಿನಿಯಮದ 8ನೇ ಪ್ರಕರಣದ (2)ನೇ ಉಪಪ್ರಕರಣದ, (ಬಿ) ಖಂಡದ ತರುವಾಯ, ಈ ಮುಂದಿನ ಹೊಸ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಸಿ) ಪ್ರಾಧಿಕಾರವು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997 (2001ರ ಕರ್ನಾಟಕ ಅಧಿನಿಯಮ ಸಂ. 33)ರ ಉಪಬಂಧಗಳಡಿಯಲ್ಲಿ ಅಧಿಸೂಚಿಸಲಾದಂತೆ "ಸಿ" ಪ್ರವರ್ಗದ ದೇವಸ್ಥಾನಗಳನ್ನು ದತ್ತು ತೆಗೆದುಕೊಳ್ಳುವ ಯೋಜನೆಯನ್ನು ಅನುಮೋದಿಸಬಹುದು ಮತ್ತು ಸದರಿ ದತ್ತು ತೆಗೆದುಕೊಳ್ಳಲು ಅಗತ್ಯವಾದ ಉಪಬಂಧಗಳನ್ನು ನಿರ್ದಿಷ್ಟಪಡಿಸಬಹುದು".

**5. 10ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ, 10ನೇ ಪ್ರಕರಣದ, (1)ನೇ ಉಪಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ರಾಜ್ಯ ಸರ್ಕಾರವು, ಧರ್ಮಾದಾಯ ಇಲಾಖೆಯ ಎ-ದರ್ಜೆಯ ಹಿರಿಯ ಶ್ರೇಣಿಯ ಅಧಿಕಾರಿಯನ್ನು ಪ್ರಾಧಿಕಾರದ ಕಾರ್ಯದರ್ಶಿಯಾಗಿ ಮತ್ತು ಧರ್ಮಾದಾಯ ಇಲಾಖೆಯ ಬಿ-ದರ್ಜೆಯ ಅಧಿಕಾರಿಯನ್ನು ಪ್ರಾಧಿಕಾರದ ಉಪಕಾರ್ಯದರ್ಶಿಯಾಗಿ ನೇಮಿಸತಕ್ಕದ್ದು.

**6. 12ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ, 12ನೇ ಪ್ರಕರಣದ, (1)ನೇ ಉಪಪ್ರಕರಣದ, ಎರಡನೇ ಪರಂತುಕಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ರಾಜ್ಯ ಸರ್ಕಾರವು ಪ್ರಾಧಿಕಾರವು ಕೈಗೊಳ್ಳುವ ಕಾಮಗಾರಿಗಳ ನಿರ್ವಹಣೆಗಾಗಿ ಲೋಕೋಪಯೋಗಿ ಇಲಾಖೆಯಿಂದ ಕಾರ್ಯಪಾಲಕ ಅಭಿಯಂತರರನ್ನು ನಿಯೋಜನೆ ಮೇಲೆ ನೇಮಕ ಮಾಡತಕ್ಕದ್ದು ಹಾಗೂ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನಾ ಮತ್ತು ಲೆಕ್ಕಪತ್ರ ಇಲಾಖೆಯಿಂದ ``ಎ'' ದರ್ಜೆಗೆ ಕಡಿಮೆಯಲ್ಲದ ಲೆಕ್ಕಾಧಿಕಾರಿಯನ್ನು ಸಹ ನಿಯೋಜನೆಯ ಮೇಲೆ ನೇಮಕ ಮಾಡತಕ್ಕದ್ದು.

ಅಲ್ಲದೆ ಪರಂತು, ಕಾರ್ಯಪಾಲಕ ಅಭಿಯಂತರರು ದುರಸ್ತಿ ಕಾಮಗಾರಿಗಳ ಪ್ರಗತಿ ಪುನರೀಕ್ಷಣೆ, ನೀತಿ ನಿರ್ಣಯಗಳು, ಆಧುನಿಕ ತಂತ್ರಜ್ಞಾನದ ಪರಿಚಯ, ಆಯವ್ಯಯದ ಹಂಚಿಕೆ, ಆಯವ್ಯಯದ ಪುನರೀಕ್ಷಣೆ, ಹೊರಗಿನ ಎಲ್ಲಾ ಸಂಸ್ಥೆಗಳೊಂದಿಗೆ ಸಮನ್ವಯ ಮತ್ತು ಗುಣಮಟ್ಟದ ಪರೀಕ್ಷೆಗಾಗಿ ಇಷ್ಟಾನುಸಾರ ಸ್ಥಳ ಪರಿಶೀಲನೆಯ ಸಮಗ್ರ ಮೇಲ್ವಿಚಾರಣೆ ಹಾಗೂ ಪ್ರಾಧಿಕಾರದ ಅಧಿಕಾರವ್ಯಾಪ್ತಿಯೊಳಗೆ ಬರುವ ಕಟ್ಟಡಗಳ ನಿರ್ಮಾಣ ಅಥವಾ ನವೀಕರಣಕ್ಕೆ ನಿರಾಕ್ಷೇಪಣಾ ಪತ್ರವನ್ನು ಹೊರಡಿಸುವ ಜವಾಬ್ದಾರಿ ಹೊಂದಿರತಕ್ಕದ್ದು."

**7. 17-ಎ ಹೊಸ ಪ್ರಕರಣ ಸೇರ್ಪಡೆ.-** ಮೂಲ ಅಧಿನಿಯಮದ 17ನೇ ಪ್ರಕರಣದ ತರುವಾಯ, ಈ ಮುಂದಿನ ಹೊಸ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

**"17-ಎ. ಜಿಲ್ಲಾ ಮಟ್ಟದ ಮತ್ತು ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿ.-** (1) ಪ್ರಾಧಿಕಾರದ ಅಧಿಕಾರವ್ಯಾಪ್ತಿಯೊಳಗೆ ಭಕ್ತಾದಿಗಳಿಗೆ ಸುರಕ್ಷತೆಯನ್ನು ಒದಗಿಸಲು ಮತ್ತು ಭಕ್ತಾದಿಗಳಿಗೆ ಅಗತ್ಯ ಸೌಲಭ್ಯಗಳಾದ ಕಟ್ಟಡಗಳು, ರಸ್ತೆಗಳು ಮತ್ತು ಸುರಂಗ ಮಾರ್ಗಗಳು, ವಿದ್ಯುಚ್ಛಕ್ತಿ ಪೂರೈಕೆ ಮತ್ತು ನಿರ್ವಹಣೆ, ನೀರು ಪೂರೈಕೆ ಮತ್ತು ನೈರ್ಮಲ್ಯೀಕರಣ, ಮನೋರಂಜನಾ ಕೇಂದ್ರಗಳ ನಿರ್ಮಾಣ ಮತ್ತು ಗ್ರಂಥಾಲಯಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಪುನರೀಕ್ಷಿಸಲು ಮತ್ತು ಸಲ್ಲಿಸಲು ಜಿಲ್ಲಾ ಮಟ್ಟದ ಮತ್ತು ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿಯನ್ನು ರಚಿಸತಕ್ಕದ್ದು.

(2) ಜಿಲ್ಲಾ ಮಟ್ಟದ ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| (ಎ) | ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ | ಪದನಿಮಿತ್ತ ಅಧ್ಯಕ್ಷರು |
| (ಬಿ) | ಪೊಲೀಸು ಅಧೀಕ್ಷಕರು, ಚಾಮರಾಜನಗರ ಜಿಲ್ಲೆ | ಪದನಿಮಿತ್ತ ಸದಸ್ಯರು |
| (ಸಿ) | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತಿ, ಚಾಮರಾಜನಗರ ಜಿಲ್ಲೆ | ಪದನಿಮಿತ್ತ ಸದಸ್ಯರು |

| | | |
|---|---|---|
| (ಡಿ) | ಅರಣ್ಯ ಉಪ ಸಂರಕ್ಷಣಾಧಿಕಾರಿ<br>ಚಾಮರಾಜನಗರ ಜಿಲ್ಲೆ | ಪದನಿಮಿತ್ತ ಸದಸ್ಯರು |
| (ಇ) | ಅಧಿಕಾರವ್ಯಾಪ್ತಿಯ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಾಮರಾಜನಗರ ಜಿಲ್ಲೆ | ಪದನಿಮಿತ್ತ ಸದಸ್ಯರು |
| (ಎಫ್) | ಉಪವಿಭಾಗಾಧಿಕಾರಿ, ಕೊಳ್ಳೆಗಾಲ ಉಪವಿಭಾಗ | ಪದನಿಮಿತ್ತ ಸದಸ್ಯರು |
| (ಜಿ) | ತಹಶೀಲ್ದಾರರು, ಹನೂರು ತಾಲ್ಲೂಕು | ಪದನಿಮಿತ್ತ ಸದಸ್ಯರು |
| (ಎಚ್) | ಕಾರ್ಯನಿರ್ವಹಣಾಧಿಕಾರಿ, ಹನೂರು ತಾಲ್ಲೂಕು ಪಂಚಾಯಿತಿ | ಪದನಿಮಿತ್ತ ಸದಸ್ಯರು |
| (ಐ) | ಅಧಿಕಾರವ್ಯಾಪ್ತಿಯ ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ | ಪದನಿಮಿತ್ತ ಸದಸ್ಯರು |
| (ಜೆ) | ಶ್ರೀ ಸಾಲೂರು ಮಠದ ಪೀಠಾಧಿಪತಿ, ಮಲೈ ಮಹದೇಶ್ವರ ಬೆಟ್ಟ ಅಥವಾ ಅವರ ಪ್ರತಿನಿಧಿ | ಸದಸ್ಯರು |
| (ಕೆ) | ಅಧಿಕಾರವ್ಯಾಪ್ತಿಯ ಸಹಾಯಕ ನಿರ್ದೇಶಕರು, ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಇಲಾಖೆ | ಪದನಿಮಿತ್ತ ಸದಸ್ಯರು |
| (ಎಲ್) | ಅಧಿಕಾರವ್ಯಾಪ್ತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಹದೇಶ್ವರ ಬೆಟ್ಟ | ಪದನಿಮಿತ್ತ ಸದಸ್ಯರು |
| (ಎಂ) | ಪ್ರಾಧಿಕಾರದ ಕಾರ್ಯದರ್ಶಿ | ಪದನಿಮಿತ್ತ ಸದಸ್ಯ ಕಾರ್ಯದರ್ಶಿ |

(3) ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಯು, ಪ್ರಾಧಿಕಾರದ ಅಧಿಕಾರವ್ಯಾಪ್ತಿಯಲ್ಲಿ ತಮ್ಮ ಇಲಾಖೆಗಳಿಗೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕಾಮಗಾರಿಗಳು ಅಥವಾ ಪ್ರಸ್ತಾವನೆಗಳಿಗಾಗಿ ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿಗೆ ಸೂಕ್ತ ಪ್ರಸ್ತಾವನೆಗಳನ್ನು ಸಲ್ಲಿಸತಕ್ಕದ್ದು .

(4) ರಾಜ್ಯ ಮಟ್ಟದ ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| (ಎ) | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ಮುಜರಾಯಿ) | ಪದನಿಮಿತ್ತ ಅಧ್ಯಕ್ಷರು |
| (ಬಿ) | ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ | ಪದನಿಮಿತ್ತ ಸದಸ್ಯರು |
| (ಸಿ) | ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ | ಪದನಿಮಿತ್ತ ಸದಸ್ಯರು |
| (ಡಿ) | ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ | ಪದನಿಮಿತ್ತ ಸದಸ್ಯರು |
| (ಇ) | ಮುಖ್ಯ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | ಪದನಿಮಿತ್ತ ಸದಸ್ಯರು |
| (ಎಫ್) | ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ | ಪದನಿಮಿತ್ತ ಸದಸ್ಯರು |
| (ಜಿ) | ಪೊಲೀಸ್ ಅಧೀಕ್ಷಕರು, ಚಾಮರಾಜನಗರ ಜಿಲ್ಲೆ | ಪದನಿಮಿತ್ತ ಸದಸ್ಯರು |
| (ಎಚ್) | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ಚಾಮರಾಜನಗರ ಜಿಲ್ಲೆ | ಪದನಿಮಿತ್ತ ಸದಸ್ಯರು |

| | | |
|---|---|---|
| (ಐ) | ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ | ಪದನಿಮಿತ್ತ ಸದಸ್ಯರು |
| (ಜೆ) | ನಿರ್ದೇಶಕರು, ಗ್ರಾಮೀಣ ನೀರು ಸರಬರಾಜು ಇಲಾಖೆ, ಬೆಂಗಳೂರು | ಪದನಿಮಿತ್ತ ಸದಸ್ಯರು |
| (ಕೆ) | ಪ್ರಾಧಿಕಾರದ ಕಾರ್ಯದರ್ಶಿ | ಪದನಿಮಿತ್ತ ಸದಸ್ಯ ಕಾರ್ಯದರ್ಶಿ |

(5) ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿಯು ಜಿಲ್ಲಾ ಮಟ್ಟದ ಸಮಿತಿಯ ಮೂಲಕ ಸಲ್ಲಿಸಿದ ಪ್ರಸ್ತಾವನೆಗಳನ್ನು ಪರಿಶೀಲಿಸತಕ್ಕದ್ದು ಮತ್ತು ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಮೇಲೆ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡತಕ್ಕದ್ದು.

(6) ಜಿಲ್ಲಾ ಮಟ್ಟದ ಸಮಿತಿ ಮತ್ತು ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿಯು ಕನಿಷ್ಠ ಮೂರು ತಿಂಗಳಿಗೆ ಒಮ್ಮೆಯಾದರೂ ನಿಯಮಿಸಬಹುದಾದ ಅಂಥ ಸ್ಥಳ ಮತ್ತು ಅಂಥ ಸಮಯದಲ್ಲಿ ಸಭೆ ಸೇರತಕ್ಕದ್ದು ಮತ್ತು ಅಂಥ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳತಕ್ಕದ್ದು.

**8. 18ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ, 18ನೇ ಪ್ರಕರಣದ, (2)ನೇ ಉಪಪ್ರಕರಣದ ಬದಲಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) 12ನೇ ಪ್ರಕರಣದ (1)ನೇ ಉಪ-ಪ್ರಕರಣಕ್ಕೆ ಒಳಪಟ್ಟು ಮತ್ತು ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2025ರ ಪ್ರಾರಂಭದ ದಿನಾಂಕದಿಂದ ದೇವಸ್ಥಾನದ ನೌಕರರ ನಿರ್ವಹಣೆಯು ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು."

**9. 19ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 19ನೇ ಪ್ರಕರಣದ, (1)ನೇ ಉಪಪ್ರಕರಣದ, (ಪಿ) ಖಂಡದ ತರುವಾಯ, ಈ ಮುಂದಿನ ಹೊಸ ಖಂಡಗಳನ್ನು ಸೇರಿಸತಕ್ಕದ್ದು, ಎಂದರೆ:-

"(ಪಿ-1) ಪ್ಲಾಸ್ಟಿಕ್ ಪರಿಸರನಾಶವನ್ನು ತಡೆಯುವುದಕ್ಕಾಗಿ ಪ್ಲಾಸ್ಟಿಕ್ ಕಿವಿ ಸ್ವಚ್ಛಗೊಳಿಸುವ ಕಡ್ಡಿಗಳು, ಬಲೂನುಗಳ ಪ್ಲಾಸ್ಟಿಕ್ ಕಡ್ಡಿಗಳು, ಪ್ಲಾಸ್ಟಿಕ್ ಬಾವುಟಗಳು, ಮಿಠಾಯಿ ಕಡ್ಡಿಗಳು, ಐಸ್ ಕ್ರೀಂ ಕಡ್ಡಿಗಳು, ಅಲಂಕಾರಕ್ಕಾಗಿ ಥರ್ಮಾಕೋಲು, ತಟ್ಟೆಗಳು, ಬಟ್ಟಲುಗಳು, ಲೋಟಗಳು, ಮುಳ್ಳು ಚಮಚಗಳು, ಚಮಚಗಳು, ಚಾಕುಗಳು, ಪೈಪುಗಳು, ತಟ್ಟೆಗಳಂಥ ಚಾಕುಚಮಚಗಳು, ಸಿಹಿತಿಂಡಿ ಪೊಟ್ಟಣಗಳ ಸುತ್ತ ಹೊದಿಯುವ ಅಥವಾ ಕಟ್ಟುವ ಹೊದಿಕೆ, ಆಹ್ವಾನ ಪತ್ರಿಕೆಗಳು, ಸಿಗರೇಟು ಡಬ್ಬಿಗಳು, 100 ಮೈಕ್ರೋನ್‌ಗಳಿಗಿಂತ ಕಡಿಮೆಯ ಪ್ಲಾಸ್ಟಿಕ್ಕಿನ ಅಥವಾ ಪಿವಿಸಿ ಪಟಗಳು (ಬ್ಯಾನರ್), ಚಿಂದಿ ಆರಿಸು (ಸ್ಟಿರರ್ಸ್) ವವರನ್ನು ಪ್ರಾಧಿಕಾರದ ಪ್ರದೇಶದಲ್ಲಿ ಪ್ರತಿಬಂಧಿಸುವುದು;

(ಪಿ-2) ಪ್ರಾಧಿಕಾರದ ಪ್ರದೇಶದಲ್ಲಿ ವರ್ಷ ಪೂರ್ತಿ, ಎಲ್ಲರಿಗೂ ಸುರಕ್ಷಿತ ಮತ್ತು ಸ್ವಚ್ಛ ನೀರು ಮತ್ತು ಶೌಚ ಸೌಲಭ್ಯದ ಲಭ್ಯತೆಯನ್ನು ಖಚಿತಪಡಿಸುವುದು".

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
### (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013 (2013ರ ಕರ್ನಾಟಕ ಅಧಿನಿಯಮ ಸಂಖ್ಯೆ 37)ನ್ನು ಈ ಮುಂದಿನವುಗಳಿಗಾಗಿ,-

(i) ಆಡಳಿತಾತ್ಮಕ ಚೌಕಟ್ಟನ್ನು ಬಲಪಡಿಸುವುದು ಮತ್ತು ಅಧಿನಿಯಮದ ಉಪಬಂಧಗಳ ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಲು;

(ii) ಚಾಲ್ತಿಯಲ್ಲಿರುವ ಶಾಸನಬದ್ಧ ಮತ್ತು ಆಡಳಿತಾತ್ಮಕ ಮಾನದಂಡಗಳಿಗೆ ಅನುಗುಣವಾಗಿ ಅಸ್ತಿತ್ವದಲ್ಲಿರುವ ನೀತಿ ಕಾರ್ಯವಿಧಾನಗಳನ್ನು ಪರಿಶೀಲಿಸಲು ಮತ್ತು ಪರಿಷ್ಕರಿಸಲು;

(iii) ಪ್ರಾಧಿಕಾರದ ಸುಗಮ ಕಾರ್ಯನಿರ್ವಹಣೆಗಾಗಿ ಜಿಲ್ಲಾ ಮತ್ತು ರಾಜ್ಯ ಮಟ್ಟದ ಸಮಿತಿಗಳನ್ನು ರಚಿಸಲು; ಮತ್ತು

(iv) ನಿರ್ಧಾರ ಕೈಗೊಳ್ಳುವಿಕೆ, ಉತ್ತಮ ಯೋಜನೆ, ಸಮನ್ವಯ ವೃದ್ಧಿಯನ್ನು ಸುಗಮಗೊಳಿಸಲು ಮತ್ತು ಸಾಂಸ್ಥಿಕ ಹೊಣೆಗಾರಿಕೆಯನ್ನು ಖಚಿತಪಡಿಸಲು;

- ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ,

## **ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

**ರಾಮಲಿಂಗಾ ರೆಡ್ಡಿ**
ಸಾರಿಗೆ ಮತ್ತು ಮುಜರಾಯಿ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ಅನುಬಂಧ**

**ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2013**

**(2013ರ ಕರ್ನಾಟಕ ಅಧಿನಿಯಮ ಸಂಖ್ಯೆ 37) ಉದ್ಧೃತ ಭಾಗ**

**XXX XXX XXX**

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ``ಸೌಕರ್ಯ'' ಎಂಬುದರಲ್ಲಿ ರಸ್ತೆಗಳು, ಬೀದಿಗಳು, ಸುರಂಗ ಮಾರ್ಗಗಳು, ದೀಪವ್ಯವಸ್ಥೆ, ಚರಂಡಿ ವ್ಯವಸ್ಥೆ, ನಿರ್ಮಲೀಕರಣ, ವಿದ್ಯುಚ್ಛಕ್ತಿ ಮತ್ತು ನೀರು ಸರಬರಾಜು ಅಥವಾ ಇತರ ಅನುಕೂಲಗಳು; ಲೋಕೋಪಯೋಗಿ ಕಾಮಗಾರಿಗಳು, ಮಾರುಕಟ್ಟೆ ಸ್ಥಳಗಳು, ಅಂಚೆ ಕಚೇರಿ, ಬ್ಯಾಂಕು, ಆಸ್ಪತ್ರೆ, ಚಿಕಿತ್ಸಾಲಯ, ಪೊಲೀಸು ಠಾಣೆ, ನ್ಯಾಯಬೆಲೆ ಅಂಗಡಿ, ಹಾಲಿನ ಕೇಂದ್ರ, ಗ್ರಂಥಾಲಯ, ಮನೋರಂಜನಾ ಕೇಂದ್ರಗಳು, ಪ್ರಾಧಿಕಾರಿಯು ಪ್ರಾಧಿಕೃತಗೊಳಿಸಿದ ಜನೋಪಯೋಗಿ ಸೇವೆಯ ಯಾವುವೇ ಸೇವಾ ಕೇಂದ್ರಗಳು, ಅಥವಾ ಇತರ ಸೌಲಭ್ಯಗಳು; ಮತ್ತು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸೌಕರ್ಯಗಳು ಒಳಗೊಳ್ಳುತ್ತವೆ;

(ಬಿ) ``ಪ್ರಾಧಿಕಾರ'' ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ;

(ಸಿ) ``ಅಧ್ಯಕ್ಷ'' ಎಂದರೆ, ಪ್ರಾಧಿಕಾರದ ಅಧ್ಯಕ್ಷ;

(ಡಿ) ``ನಿಧಿ'' ಎಂದರೆ, ಪ್ರಾಧಿಕಾರದ ನಿಧಿ;

(ಇ) ``ಕಾರ್ಯದರ್ಶಿ '' ಎಂದರೆ, 10ನೇ ಪ್ರಕರಣದ ಅಡಿಯಲ್ಲಿ ನೇಮಕ ಮಾಡಲಾದ ಪ್ರಾಧಿಕಾರದ ಕಾರ್ಯದರ್ಶಿ;

(ಎಫ್) ``ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ'' ಎಂದರೆ, ಅದು ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನ ಮತ್ತು ಚಾಮರಾಜನಗರ ಜಿಲ್ಲೆಯಲ್ಲಿನ ಕೊಳ್ಳೆಗಾಲ ತಾಲ್ಲೂಕಿನ ಮಲೈ ಮಹದೇಶ್ವರ ಬೆಟ್ಟಗಳಲ್ಲಿ ಅದಕ್ಕೆ ಸೇರಿಕೊಂಡ ಎಲ್ಲಾ ಅಧೀನ ದೇವಸ್ಥಾನಗಳು, ಮಲೈ ಮಹದೇಶ್ವರ ಬೆಟ್ಟಗಳ ಇಡೀ ಪ್ರದೇಶ ಮತ್ತು ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ಅಭಿವೃದ್ಧಿಗಾಗಿ ಸರ್ಕಾರವು ಕಾಲಕಾಲಕ್ಕೆ ಆರ್ಜಿಸಬಹುದಾದ ಭೂಪ್ರದೇಶ ಹಾಗೂ ರಾಜ್ಯಸರ್ಕಾರವು ಅಧಿಸೂಚನೆಯ ಮೂಲಕ ಘೋಷಿಸಬಹುದಾದ ಅಂಥ ಇತರೆ ಪ್ರದೇಶಗಳು ಇವುಗಳನ್ನು ಒಳಗೊಳ್ಳುತ್ತದೆ;

(ಜಿ) ``ಸದಸ್ಯ'' ಎಂದರೆ, ಪ್ರಾಧಿಕಾರದ ಸದಸ್ಯ;

(ಎಚ್) ``ವಿನಿಯಮಗಳು'' ಎಂದರೆ, 38ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರಾಧಿಕಾರದ ವಿನಿಯಮಗಳು;

**XXX XXX XXX**

**3. ಪ್ರಾಧಿಕಾರದ ರಚನೆ.-** (4) ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಜಿ) ಸಂಪರ್ಕ ಮತ್ತು ಕಟ್ಟಡದ ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ;

(ಎಚ್) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ; ಅಥವಾ ಅವರ ನಾಮನಿರ್ದೇಶಿತರು

(ಐ) ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯದತ್ತಿಗಳು, ಕಂದಾಯ ಇಲಾಖೆ, ಇದರ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ;

(ಜೆ) ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ (ಮುಜರಾಯಿ) ಅಥವಾ ಅವರ ಪ್ರತಿನಿಧಿ;

(ಜೆ-1) ಆಯುಕ್ತರು, ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಇಲಾಖೆ, ಬೆಂಗಳೂರು;

(ಜೆ-2) ಪ್ರಧಾನ ಅರ್ಚಕರು, ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನ

(ಕೆ) ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ;

(ಎಲ್) ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಾಮರಾಜನಗರ ಜಿಲ್ಲೆ;

(ಎಂ) ನಿರ್ದೇಶಕರು, ಪುರಾತತ್ವ ಶಾಸ್ತ್ರ ಮತ್ತು ವಸ್ತು ಸಂಗ್ರಹಾಲಗಳ ಇಲಾಖೆ, ಮೈಸೂರು;

(ಎನ್) ಪ್ರಾಧಿಕಾರದ ಕಾರ್ಯದರ್ಶಿ, ಇವರು ಸದಸ್ಯಕಾರ್ಯದರ್ಶಿಯಾಗಿರತಕ್ಕದ್ದು.

**XXX** **XXX** **XXX**

**8. ಪ್ರಾಧಿಕಾರದ ಅಧಿಕಾರಗಳು.-** (1) ಇತರ ಯಾವುದೇ ಪ್ರಾಧಿಕಾರದ ಮೂಲಕ ನೆರವೇರಿಸಬೇಕೆಂದು ಅಧಿನಿಯಮದಲ್ಲಿ ನಿರ್ದಿಷ್ಟವಾಗಿ ತಿಳಿಸಿದ ಅಂಥ ಯಾವುದೇ ಕಾರ್ಯವನ್ನು ನೆರವೇರಿಸುವುದನ್ನು ಹೊರತುಪಡಿಸಿ, ಪ್ರಾಧಿಕಾರವು, ಈ ಅಧಿನಿಯಮದ ಆಶಯಗಳು ಮತ್ತು ಉಪಬಂಧಗಳನ್ನು ಜಾರಿಗೆ ತರಲು ತಾನು ಅವಶ್ಯವೆಂದು ಅಭಿಪ್ರಾಯ ಪಡುವಂಥ ಯಾವುವೇ ಕಾರ್ಯಗಳನ್ನು ಮಾಡಲು ಸಾಮಾನ್ಯವಾಗಿ ಅಧಿಕಾರ ಹೊಂದಿರತಕ್ಕದ್ದು.

(2) (1)ನೇ ಉಪಪ್ರಕರಣದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಪ್ರಾಧಿಕಾರವು,-

(ಎ) ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಈ ಅಧಿನಿಯಮದ ಯಾವುದೇ ಉದ್ದೇಶವನ್ನು ನೆರವೇರಿಸಲು ಅವಶ್ಯಕ ಅಥವಾ ಯುಕ್ತವೆಂದು ತಾನು ಪರಿಗಣಿಸುವಂಥ ಎಲ್ಲ ಕರಾರುಗಳನ್ನು ಮಾಡಿಕೊಳ್ಳಲು ಮತ್ತು ನಿರ್ವಹಿಸಲು ಅಧಿಕಾರ ಹೊಂದಿರತಕ್ಕದ್ದು ಮತ್ತು ಪ್ರತಿಯೊಂದು ಕರಾರನ್ನು ಪ್ರಾಧಿಕಾರದ ಪರವಾಗಿ ಕಾರ್ಯದರ್ಶಿಯು ಮಾಡಿಕೊಳ್ಳತಕ್ಕದ್ದು:

ಪರಂತು, ಹತ್ತು ಲಕ್ಷ ರೂಪಾಯಿಗಳ ಅಥವಾ ಅದಕ್ಕೂ ಹೆಚ್ಚಿನ ವೆಚ್ಚವನ್ನೊಳಗೊಂಡ ಪ್ರತಿಯೊಂದು ಕರಾರಿನ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(ಬಿ) ರಾಜ್ಯಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮತ್ತು ಈ ಸಂಬಂಧವಾಗಿ ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗಾಗಿ ಕಾಲಕಾಲಕ್ಕೆ ಅಗತ್ಯವಾಗುವ ಯಾವುದೇ ಮೊಬಲಗನ್ನು ಸಾಲವಾಗಿ ಪಡೆಯಲು ಅಧಿಕಾರವನ್ನು ಹೊಂದಿರತಕ್ಕದ್ದು. ಈ ಬಗ್ಗೆ ಒಂದು ಅನುಸರಣಾ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

**XXX** **XXX** **XXX**

**10. ಕಾರ್ಯದರ್ಶಿಯ ನೇಮಕಾತಿ.-** (1) ರಾಜ್ಯ ಸರ್ಕಾರವು, ಕರ್ನಾಟಕ ಆಡಳಿತ ಸೇವೆಗಳ ಹಿರಿಯ ಶ್ರೇಣಿಯ ಅಧಿಕಾರಿಯನ್ನು ಪ್ರಾಧಿಕಾರದ ಕಾರ್ಯದರ್ಶಿಯಾಗಿ ಮತ್ತು ಧರ್ಮಾದಾಯ ಇಲಾಖೆಯ ಕಾರ್ಯನಿರ್ವಹಣಾ ಅಧಿಕಾರಿಯನ್ನು ಪ್ರಾಧಿಕಾರದ ಉಪಕಾರ್ಯದರ್ಶಿಯಾಗಿ ನೇಮಿಸತಕ್ಕದ್ದು.

(2) ಕಾರ್ಯದರ್ಶಿಯು, ಮತ್ತು ಇತರ ಅಧಿಕಾರಿಗಳು ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ವೇತನ ಮತ್ತು ಇತರ ಭತ್ಯೆಗಳನ್ನು ಪಡೆಯತಕ್ಕದ್ದು.

(3) ರಾಜ್ಯ ಸರ್ಕಾರವು, ಕಾಲಕಾಲಕ್ಕೆ ತಾನು ಯುಕ್ತವೆಂದು ಭಾವಿಸುವ ಅಂಥ ಅವಧಿಗೆ ಕಾರ್ಯದರ್ಶಿಗೆ ರಜೆಯನ್ನು ಮಂಜೂರು ಮಾಡಬಹುದು.

**XXX** **XXX** **XXX**

**12. ಪ್ರಾಧಿಕಾರದ ನೌಕರರು.-** (1) ನಿಯಮಿಸಬಹುದಾದ ಅಂಥ ನಿಯಮಗಳಿಗೊಳಪಟ್ಟು, ಪ್ರಾಧಿಕಾರವು, ಅಧಿನಿಯಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅದು ಅವಶ್ಯಕವೆಂದು ಭಾವಿಸುವಂಥ ಸಂಖ್ಯೆಯ ನೌಕರರನ್ನು ನೇಮಕ ಮಾಡಿಕೊಳ್ಳಬಹುದು:

ಪರಂತು, ರಾಜ್ಯ ಸರ್ಕಾರವು, ಈ ಅಧಿನಿಯಮದಡಿಯಲ್ಲಿ ನಿಯಮಗಳನ್ನು ರಚಿಸುವವರೆಗೆ, ಶ್ರೀ ಮಲೈ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರ್ಚಕರನ್ನು ಒಳಗೊಂಡಂತೆ ನೌಕರರ ನೇಮಕಾತಿ ವಿಧಾನ ಮತ್ತು ಸೇವಾ ಷರತ್ತುಗಳು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001 ರ ಕರ್ನಾಟಕ ಅಧಿನಿಯಮ 33) ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳ ಉಪಬಂಧಗಳ ನಿಯಂತ್ರಣದಲ್ಲಿಯೇ ಮುಂದುವರೆಯತಕ್ಕದ್ದು.

ಮತ್ತು ಪರಂತು, ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ``ಎ'' ಗುಂಪಿನ ಕಿರಿಯ ವೇತನ ಶ್ರೇಣಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯನ್ನು ಪ್ರತಿನಿಯೋಜನೆಯ ಮೇಲೆ ಹಣಕಾಸು ಮತ್ತು ಲೆಕ್ಕಪತ್ರ ಸಲಹೆಗಾರರಾಗಿ ನೇಮಕ ಮಾಡತಕ್ಕದ್ದು.

(2) ಹಣಕಾಸು ಮತ್ತು ಲೆಕ್ಕಪತ್ರ ಸಲಹೆಗಾರರು ಕಾರ್ಯದರ್ಶಿಯ ಅಧೀನದಲ್ಲಿ ಕೆಲಸ ಮಾಡತಕ್ಕದ್ದು ಮತ್ತು ಅವರು ಹಣಕಾಸು ನಿಯಮಗಳನ್ನು ಪಾಲಿಸಿಕೊಂಡು ಬರುವಂತೆ ಹಾಗೂ ಪ್ರಾಧಿಕಾರದ ಹಣಕಾಸು ವ್ಯವಹಾರಗಳ ಬಗ್ಗೆ ವಾಸ್ತವಿಕವಾದ ಹಾಗೂ ನ್ಯಾಯವಾದ ಚಿತ್ರಣವನ್ನು ನೀಡುವಂತೆ ಲೆಕ್ಕಪತ್ರಗಳನ್ನು ಅಂದಿನ ದಿನವರೆಗೆ ನಿರ್ವಹಿಸಿಕೊಂಡು ಬರುವಂತೆ ನೋಡಿಕೊಳ್ಳತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನೌಕರರ ವೇತನಗಳು, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(4) ಕಾರ್ಯದರ್ಶಿಯು, ಪ್ರಾಧಿಕಾರದ ನೌಕರರಿಗೆ ಸಂಬಂಧಿಸಿದಂತೆ ನೇಮಕಾತಿ ಮತ್ತು ಶಿಸ್ತುಪ್ರಾಧಿಕಾರಿಯಾಗಿರತಕ್ಕದ್ದು ಮತ್ತು ಪ್ರಾಧಿಕಾರದ ಸಿಬ್ಬಂದಿಯ ಮೇಲೆ ಸಾಮಾನ್ಯ ನಿಯಂತ್ರಣ ಮತ್ತು ಮೇಲ್ವಿಚಾರಣೆಯನ್ನು ಹೊಂದಿರತಕ್ಕದ್ದು.

**XXX** **XXX** **XXX**

**17. ಕೆಲವೊಂದು ತೀರ್ಮಾನಗಳನ್ನು ಕೈಗೊಳ್ಳಲು ಅಧ್ಯಕ್ಷರ ಅಧಿಕಾರ.-** (1) ಯಾವೊಂದು ವಿಷಯವು, 14ನೇ ಪ್ರಕರಣದ ಅಡಿಯಲ್ಲಿ ಪ್ರಾಧಿಕಾರದ ಸಭೆ ಕರೆಯಲು ಅಗತ್ಯಪಡಿಸುವಷ್ಟು ಅಥವಾ ೧೬ನೇ ಪ್ರಕರಣದ ಅಡಿಯಲ್ಲಿ ಸುತ್ತೋಲೆಯ ಮೂಲಕ ಪ್ರಾಧಿಕಾರವು ತೀರ್ಮಾನಿಸುವವರೆಗೂ ಕಾಯಲು ಸಾಧ್ಯವಾಗದಷ್ಟು ತುರ್ತು ಸ್ವರೂಪದ್ದಾಗಿದೆಯೆಂದು ಅಧ್ಯಕ್ಷರು ಅಭಿಪ್ರಾಯಪಟ್ಟಲ್ಲಿ ಅವರು, ತಾವು ಯುಕ್ತವೆಂದು ಭಾವಿಸುವಂಥ ಆದೇಶಗಳನ್ನು ನೀಡಬಹುದು ಹಾಗೂ 14 ಮತ್ತು 16ನೇ ಪ್ರಕರಣದ ಅಡಿಯಲ್ಲಿ ಅದನ್ನು ಪ್ರಾಧಿಕಾರದ ತೀರ್ಮಾನಗಳ ರೀತಿಯಲ್ಲಿಯೇ ಅನುಷ್ಠಾನಗೊಳಿಸತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿ ಅಧ್ಯಕ್ಷನು ತೆಗೆದುಕೊಂಡ ಪ್ರತಿಯೊಂದು ತೀರ್ಮಾನವನ್ನು ಪ್ರಾಧಿಕಾರಕ್ಕೆ, ಅದರ ಮುಂದಿನ ಸಭೆಯಲ್ಲಿ ಅನುಸಮರ್ಥನೆಗಾಗಿ ವರದಿ ಮಾಡತಕ್ಕದ್ದು.

(3) ಅಧ್ಯಕ್ಷರ ತೀರ್ಮಾನವನ್ನು ಪ್ರಾಧಿಕಾರವು ಒಪ್ಪದಿದ್ದಲ್ಲಿ, ಅದನ್ನು ಸೂಕ್ತ ಆದೇಶಕ್ಕಾಗಿ, ಕಾರ್ಯದರ್ಶಿಯು ಸರ್ಕಾರಕ್ಕೆ ಕಳುಹಿಸತಕ್ಕದ್ದು.

**XXX XXX XXX**

**18. ದೇವಸ್ಥಾನದ ಚರ ಮತ್ತು ಸ್ಥಿರ ಸ್ವತ್ತುಗಳಿಗೆ ಸಂಬಂಧಿಸಿದ ಉಪಬಂಧ.-** (1) ಮಲೈ ಮಹದೇಶ್ವರಸ್ವಾಮಿ ದೇವಸ್ಥಾನವನ್ನು ನಿಯಂತ್ರಿಸುವ ಯಾವುದೇ ಪದ್ಧತಿ, ರೂಢಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಲ್ಲಿ ಅಥವಾ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ,1997 (2001 ರ ಕರ್ನಾಟಕ ಅಧಿನಿಯಮ 33) ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ದೇವಸ್ಥಾನದ ಒಡೆತನ, ಆಡಳಿತ ಮತ್ತು ಆಭರಣಗಳು ಮತ್ತು ಹೊಣೆಗಾರಿಕೆಗಳನ್ನೂ ಒಳಗೊಂಡಂತೆ ಚರ ಮತ್ತು ಸ್ಥಿರ ಸ್ವತ್ತುಗಳ ಸಂಪೂರ್ಣ ನಿರ್ವಹಣೆಯು, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2014ರ ಪ್ರಾರಂಭದ ದಿನಾಂಕದಿಂದ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು ಮತ್ತು ತದನಂತರ ಪ್ರಾಧಿಕಾರಕ್ಕೆ ವರ್ಗಾಯಿಸತಕ್ಕದ್ದು.

(2) 12 ಪ್ರಕರಣದ (1)ನೇ ಉಪಪ್ರಕರಣಕ್ಕೆ ಒಳಪಟ್ಟು ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2014ರ ಪ್ರಾರಂಭದ ದಿನಾಂಕದಂದು ಮತ್ತು ಅಂದಿನಿಂದ ದೇವಸ್ಥಾನದ ನೌಕರರ ನಿರ್ವಹಣೆಯು ಪ್ರಾಧಿಕಾರದಲ್ಲಿ ನಿಹಿತವಾಗಿರತಕ್ಕದ್ದು.

(3) ರಾಜ್ಯ ಸರ್ಕಾರವು ತಾತ್ಕಾಲಿಕ ಉಪಬಂಧಗಳನ್ನು ಮಾಡುವುದು ಯುಕ್ತವೆಂದು ಅಭಿಪ್ರಾಯಪಟ್ಟಲ್ಲಿ, ಆದೇಶದ ಮೂಲಕ ಹಾಗೆ ಮಾಡಲು ರಾಜ್ಯ ಸರ್ಕಾರವು ಸಕ್ಷಮವಾಗಿರತಕ್ಕದ್ದು.

**XXX XXX XXX**

**19. ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು, ಅದರ ಅನುಮೋದನೆ ಹಾಗೂ ಅದನ್ನು ಕಾರ್ಯಗತಗೊಳಿಸುವುದು**.-(1) ಪ್ರಾಧಿಕಾರವು, ಅದರ ರಚನೆಯಾದ ಮೇಲೆ, ಆದಷ್ಟು ಬೇಗನೆ ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರವನ್ನು ಅಂತಾರಾಷ್ಟ್ರೀಯ ಯಾತ್ರಾ ಸ್ಥಳವನ್ನಾಗಿ ಮತ್ತು ಸಾಂಸ್ಕೃತಿಕ ಹಾಗೂ ಪ್ರವಾಸಿ ಕೇಂದ್ರವನ್ನಾಗಿ ಮತ್ತು ಶ್ರೀ ಮಲೈ ಮಹದೇಶ್ವರಸ್ವಾಮಿ ಮತ್ತು ಇತರ ಅಧೀನ ದೇವತೆಗಳ ಪ್ರಚಾರದ

ಕೇಂದ್ರವನ್ನಾಗಿ ಮಾಡಿ ಅಭಿವೃದ್ಧಿಗೊಳಿಸಲು ಯೋಜನೆಯನ್ನು ಸಿದ್ಧಪಡಿಸತಕ್ಕದ್ದು. ಅಭಿವೃದ್ಧಿ ಯೋಜನೆಯು ಈ ಮುಂದಿನವುಗಳನ್ನು ಒಳಗೊಂಡಿರಬಹುದು, ಎಂದರೆ:-

(ಎ) ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನದ ಮತ್ತು ಪ್ರಧಾನ ದೇವತೆಗೆ ಸಂಬಂಧಪಟ್ಟ ಇತರ ದೇವಸ್ಥಾನಗಳ ನಿರ್ವಹಣೆಗಾಗಿ ಮರುಹೊದಿಕೆ (remantling) ಕಾರ್ಯಕ್ರಮಗಳು;

(ಬಿ) ಪ್ರಾಧಿಕಾರದ ಅಭಿಪ್ರಾಯದಲ್ಲಿ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸಲು ಅವಶ್ಯವಾದ ಭೂಮಿಯನ್ನು, ಭೂಸ್ವಾಧೀನ ಅಥವಾ ಖರೀದಿ, ವಿನಿಮಯದ ಮೂಲಕ ಅಥವಾ ಅನ್ಯಥಾ ಆರ್ಜಿಸುವುದಕ್ಕಾಗಿ ಪ್ರಸ್ತಾವಗಳು;

(ಸಿ) ಸಾರ್ವಜನಿಕ ಉದ್ಯಾನವನಗಳು, ಫಲಪುಷ್ಪ ತೋಟಗಳು ಅಥವಾ ಮೃಗಾಲಯಗಳು, ಕಾರಂಜಿ ಬನಗಳು, ಕೃತಕ ಜಲಪಾತಗಳು, ಕ್ರೀಡಾ ಉದ್ಯಾನವನಗಳು, ದೋಣಿ ವಿಹಾರ ಅಥವಾ ಇತರ ಜಲ ಕ್ರೀಡಾ ಸೌಲಭ್ಯವಿರುವ ಸರೋವರಗಳನ್ನು ಅಥವಾ ಇಂಥವೇ ಪ್ರವಾಸಿಗಳಿಗೆ ಆಕರ್ಷಣೆಯನ್ನುಂಟುಮಾಡುವಂಥ ಇತರ ಕೇಂದ್ರಗಳನ್ನು ನಿರ್ಮಿಸುವುದು;

(ಡಿ) ವಿವಿಧ ವರ್ಗದ ಪ್ರವಾಸಿಗರ ಅವಶ್ಯಕತೆ ಪೂರೈಸಲು ಛತ್ರಗಳು, ವಸತಿಗೃಹಗಳು, ಕಾಟೇಜುಗಳು, ಹೋಟೆಲುಗಳು, ರೆಸ್ಟೋರೆಂಟುಗಳು ಮತ್ತು ಭೋಜನಾಲಯಗಳನ್ನು ನಿರ್ಮಿಸುವುದು;

(ಇ) ಅವಶ್ಯಕ ಸಾಲು ಅಂಗಡಿಗಳನ್ನು ಅಥವಾ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸುವುದು;

(ಎಫ್) ಆಯಕಟ್ಟಿನ ಸ್ಥಳಗಳಲ್ಲಿ ಪ್ರಾರ್ಥನಾ ಮಂದಿರಗಳ ಮತ್ತು ಧ್ಯಾನ ಮಂದಿರಗಳ ನಿರ್ಮಾಣ;

(ಜಿ) 2ನೇ ಪ್ರಕರಣದಲ್ಲಿ ಪರಿಭಾಷಿಸಲಾದಂತೆ ಸೌಕರ್ಯಗಳನ್ನು ಕಲ್ಪಿಸುವುದು;

(ಎಚ್) ಕಟ್ಟಡಗಳ ನಿರ್ಮಾಣ ಹಾಗೂ ಪುನರ್ ನಿರ್ಮಾಣವೂ ಸೇರಿದಂತೆ ಎಲ್ಲಾ ಅಥವಾ ಯಾವುದೇ ಭೂಮಿಯ ವಿನ್ಯಾಸ ಮತ್ತು ಮರು ವಿನ್ಯಾಸ;

(ಐ) ಚರಂಡಿ ವ್ಯವಸ್ಥೆ, ವಿದ್ಯುಚ್ಛಕ್ತಿ ಮತ್ತು ನೀರು ಪೂರೈಕೆ ಹಾಗೂ ನೈರ್ಮಲ್ಯ ವ್ಯವಸ್ಥೆಯನ್ನು ಒದಗಿಸುವುದು;

(ಜೆ) ಪ್ರಾಧಿಕಾರವು, ಸಾಧಾರಣವಾಗಿ ತನ್ನ ಯೋಜನಾ ಕಾರ್ಯಕ್ಕೆ ಅನುಕೂಲವಾಗುವಂತೆ ಮತ್ತು ಮುಖ್ಯವಾಗಿ ಉತ್ತಮ ನೀರು ಹರಿವಿನ ವ್ಯವಸ್ಥೆಯನ್ನು ಒದಗಿಸಲು, ಯಾವುದೇ ಭೂಮಿಯನ್ನು ಎತ್ತರಿಸುವುದು ಸೂಕ್ತವೆಂದು ಭಾವಿಸಿದರೆ ಅಂಥ ಭೂಮಿಯನ್ನು ಎತ್ತರಿಸುವುದು;

(ಕೆ) ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಥವಾ ಅದಕ್ಕೆ ಲಗತ್ತಾಗಿರುವ ಪ್ರದೇಶದಲ್ಲಿ ಉತ್ತಮ ಗಾಳಿಬೆಳಕು ದೊರಕುವಂತೆ ಖಾಲಿ ಜಾಗಗಳನ್ನು ಬಿಡುವುದು;

(ಎಲ್) ಜನರ ವಾಸಕ್ಕೆ ಯೋಗ್ಯವಲ್ಲದ ಹಾಗೂ ಅಭಿವೃದ್ಧಿ ಯೋಜನೆಗೆ ತಕ್ಕದಲ್ಲದ ಎಲ್ಲ ಕಟ್ಟಡಗಳನ್ನು ಕೆಡವುವುದು;

(ಎಂ) ಅಡಚಣೆಯನ್ನುಂಟುಮಾಡುವ ಕಟ್ಟಡಗಳನ್ನು ಅಥವಾ ಕಟ್ಟಡಗಳ ಭಾಗಗಳನ್ನು ಕೆಡವುವುದು;

(ಎನ್) ಕಟ್ಟಡಗಳ ನಿರ್ಮಾಣ ಮತ್ತು ಪುನರ್‌ನಿರ್ಮಾಣ, ಅವುಗಳ ನಿರ್ವಹಣೆ ಮತ್ತು ಸಂರಕ್ಷಣೆ;

(ಒ) 29ನೇ ಪ್ರಕರಣದಲ್ಲಿನ ಉಪಬಂಧಗಳಿಗೆ ಒಳಪಟ್ಟು, ಯೋಜನೆಯಲ್ಲಿ ಸೇರಿರುವ ಯಾವುದೇ ಸ್ವತ್ತನ್ನು ಮಾರಾಟ ಮಾಡುವುದು, ಬಾಡಿಗೆಗೆ ಕೊಡುವುದು, ಅಥವಾ ವಿನಿಮಯ ಮಾಡಿಕೊಳ್ಳುವುದು;

(ಪಿ) ಪ್ರಾಧಿಕಾರದ ನೌಕರರಿಗೆ ವಸತಿ ಸೌಲಭ್ಯವನ್ನು ಒದಗಿಸುವುದು;

(ಕ್ಯೂ) ನಿಲ್ದಾಣ ಸೌಲಭ್ಯಗಳೊಂದಿಗೆ ಸಂಪರ್ಕ ಮತ್ತು ಸಾಗಣೆ ಸೌಲಭ್ಯಗಳನ್ನು ಒದಗಿಸುವುದು;

(ಆರ್) ಅಭಿವೃದ್ಧಿ ಯೋಜನೆಯ ಭೌಗೋಳಿಕ ಪ್ರದೇಶದಲ್ಲಿ ಈಗಿರುವ ಮತ್ತು ಮುಂದುವರಿಸಲು ಅನುಮತಿಸಬಹುದಾದಂಥ ಮತೀಯ ಸಂಸ್ಥೆಗಳೊಂದಿಗೆ, ಅವು ಅಭಿವೃದ್ಧಿ ಯೋಜನೆಯ ಪರಿಕಲ್ಪನೆಗೆ ಸರಿಹೊಂದುತ್ತಿರುವವರೆಗೆ ಹೊಂದಾಣಿಕೆಗಳು ಮತ್ತು ಒಪ್ಪಂದಗಳನ್ನು ಮಾಡಿಕೊಳ್ಳುವುದು;

(ಎಸ್) ಶ್ರೀ ಮಲೈಮಹದೇಶ್ವರಸ್ವಾಮಿ ಕ್ಷೇತ್ರವನ್ನು ಸಾಂಸ್ಕೃತಿಕ ಕೇಂದ್ರವಾಗಿ, ಯಾತ್ರಾ ಸ್ಥಳವಾಗಿ ಮತ್ತು ಅಂತರರಾಷ್ಟ್ರೀಯ ಪ್ರವಾಸಿ ಕೇಂದ್ರವಾಗಿ ಹಾಗೂ ಚರ್ಚಾ ಕೇಂದ್ರವಾಗಿ ಮಾಡುವ ದೃಷ್ಟಿಯಿಂದ ಹಾಗೂ ಶ್ರೀ ಮಲೈ ಮಹದೇಶ್ವರ ಸ್ವಾಮಿಗೆ ಸಂಬಂಧಪಟ್ಟ ಇತರ ಪ್ರಮುಖ ಸ್ಥಳಗಳನ್ನು ರಕ್ಷಿಸಲು ಮತ್ತು ಅಭಿವೃದ್ಧಿಪಡಿಸಲು ಉಪಬಂಧ ಕಲ್ಪಿಸುವುದು ಯುಕ್ತ ಮತ್ತು ಆನುಷಂಗಿಕವೆಂದು ಪ್ರಾಧಿಕಾರವು ಅಭಿಪ್ರಾಯ ಪಡುವ ಯಾವುದೇ ಇತರ ವಿಷಯ.

**XXX** **XXX** **XXX**

ಸರ್ಕಾರಿ ಮುದ್ರಣಾಲಯ, ಸುವರ್ಣ ಸೌಧ, ಬೆಳಗಾವಿ, ಕಾಸೂ 65, ಪ್ರತಿಗಳು 250, 16ನೇ ಡಿಸೆಂಬರ್ 2025